ಎಂ ವಿ ಸಿ ನಂಃ 471/2025
ಆರ್. ಡಬ್ಲ್ಯೂ-1

**(ಇಂದು ದಿನಾಂಕ 05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಎದುರುದಾರರ ಪರ ಶ್ರೀ ಎಸ್ ಜಿ ಪಾಟೀಲ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರ.ಸಂ.** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಅಧಿಕಾರ ಪತ್ರ | ನಿಡಿ-1 |
| 2 | ವಿಮಾ ಪತ್ರದ ದೃಡಿಕೃತ ಪ್ರತಿ | ನಿಡಿ-2 |
| 3 | ಸಿಸಿ ನಂ.3899/2022 4 ನೇ ಅಧಿಕ ಹಿರಿಯ ಶ್ರೇಣಿ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಧಾರವಾಡ ಇವರ ಆದೇಶದ ದೃಡಿಕೃತ ಪ್ರತಿ | ನಿಡಿ-3 |

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಜಿ ಎನ್ ಜೋಶಿ ವಕೀಲರಿಂದ**

**1.** ಈ ಕಡತಕ್ಕೆ ಸಂಬಂದಿಸಿದಂತೆ ನಮ್ಮಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅರ್ಜಿದಾರ ಹಾಜರುಪಡಿಸಿರುವ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿದ್ದೇನೆ. ಅಪಘಾತ ಸಮಯದಲ್ಲಿ ಅರ್ಜಿದಾರ ತನ್ನ ಚಾಲನಾ ಪರವಾನಿಗೆ ಪತ್ರದ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಅರ್ಜಿದಾರ ಅಧಿಕೃತ ಚಾಲನಾ ಪರವಾನಿಗೆ ಹೊಂದಿದ್ದ ಎಂದರೆ ಸರಿಯಲ್ಲ. 1 ನೇ ಎದುರುದಾರನು ಚಲಾಯಿಸುತ್ತಿದ್ದ 2 ನೇ ಎದುರುದಾರನಿಗೆ ಸೇರಿದ ವಾಹನವು ನಮ್ಮ ಸಂಸ್ಥೆಯಲ್ಲಿ ವಿಮೆ ಪಡೆದಿರುವ ಕಾರಣ ನಾವೇ ಪರಿಹಾರ

ಪಾವತಿಸಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ಅರ್ಜಿದಾರನು ಅಪಘಾತದಿಂದ ಶೇಕಡಾ 75 ರಷ್ಟು ಅಂಗನ್ಯೂನತೆ ಹೊಂದಿರುವ ಕಾರಣ ನಮ್ಮ ಸಂಸ್ಥೆ ಪರಿಹಾರ ಪಾವತಿಸಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ನಾನು ಈ ದಿನ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಜಿ ಪಿ ಪಿ ವಕೀಲರಿಂದ**

2 ನೇ ಎದುರುದಾರ ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿದ್ದು ಸದರಿಯರ ಪರವಾಗಿ ಆಕ್ಷೇಪಣೆ ಅಥವಾ ತಕರಾರು ಸಲ್ಲಿಸಿರುವುದಿಲ್ಲ ಹಾಗೂ ಕೋರಿಕೆ ಇರುವುದಿಲ್ಲ. ಅದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳಳಲಾಯಿತು.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ.ಹಾಗೂ ಸಿಜೆಎಂ, ಧಾರವಾಡ.